ವಾತಾವರಣ
ಕನಿಷ್ಠ 16, ಗರಿಷ್ಠ 29 ಡಿಗ್ರಿ ಉಷ್ಣಾಂಶವಿದ್ದು, ಭಾಗಶಃ ಮೋಡ ಕವಿದ ವಾತಾವರಣ ಕಂಡುಬರಲಿದೆ.

ಪಿಎಚ್.ಡಿ ಪ್ರದಾನ

ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಸಂಶೋಧನಾ ವಿದ್ಯಾರ್ಥಿ ಸಾಜಿದ್ ನಬಿರಸುಲ್ ನೆಗಿನಲ್, ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಡಾ. ಎಂ. ಮುನಿರಾಜು ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ‘‘ಸ್ಟಡಿ ಆನ್ ಇಂಪ್ಯಾಕ್ಟ್ ಆಫ್ ಇ.ಆರ್.ಪಿ ಅಪ್ಲಿಕೇಷನ್ ಆನ್ ಆರ್ಗನೈಜೇಷನ್’’ ಎಂಬ ಸಂಶೋಧನಾ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು ನೀಡಿದೆ.

ಹಣೆ ಬರಹ

ಒಳ್ಳೆಯದೇ ಬರೆದಿರಲಿ

ಉದಯ 6.55
ಅಸ್ತ 6.28

ಸೋಮವಾರ 11.02.2019

ಶ್ರೀ ವಿಲಂಬಿ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ಷಷ್ಠಿ, ಸೋಮವಾರ, ನಿತ್ಯ ನಕ್ಷತ್ರ-ಅಶ್ವಿನಿ, ಯೋಗ-ಶುಭ, ಕರಣ-ತೈತಿಲ.

ರಾಹುಕಾಲ	ಗುಳಿಕಕಾಲ	ಯಮಗಂಡಕಾಲ
7.30-9.00	1.30-3.00	10.30-12.00

ಹನುಮಂತಾಚಾರ್ಯ ಪುರೋಹಿತ. (ಹುಬ್ಬಳ್ಳಿ)

ಮೇಷ ಭೂ ಆಸ್ತಿಯ ವಿಚಾರದಲ್ಲಿ ವಿವಾದಕ್ಕೆ ಒಳಗಾಗುವ ಸಾಧ್ಯತೆ ಇದೆ. ಅತಿಯಾದ ಗೊಂದಲಕ್ಕೆ ಈ ದಿನ ಒಳಗಾಗಲಿದ್ದೀರಿ. ಪ್ರತಿನಿತ್ಯದ ಕಾರ್ಯದಲ್ಲಿ ಮಗ್ನರಾಗಿ ವಿಶೇಷ ಕಾರ್ಯವನ್ನು ಹಮ್ಮಿಕೊಳ್ಳುವುದು ಬೇಡ.

ವೃಷಭ ವ್ಯಾಪಾರ-ವ್ಯವಹಾರದಲ್ಲಿ ವಿಘ್ನಗಳು ಉಂಟಾಗಿ ತೊಡಕಾಗುವ ಸಾಧ್ಯತೆ ಇದೆ. ಇದಕ್ಕೆ ಹೊಸ ವ್ಯವಹಾರಕ್ಕೆ ಕೈ ಹಾಕದೆ ಇರುವುದು ಜಾಣತನವಾಗಲಿದೆ. ಕುಟುಂಬದ ಸಲಹೆ-ಸೂಚನೆಯಂತೆ ನೀವು ಇಂದು ವರ್ತಿಸಬೇಕಾದದ್ದು ಅತೀ ಅವಶ್ಯ.

ಮಿಥುನ ಒತ್ತಡ ಕಾರ್ಯದಿಂದ ಹೊರ ಬಂದು ಸಮಾಧಾನ-ನೆಮ್ಮದಿಯನ್ನು ಇಂದು ಕಾಣಲಿದ್ದೀರಿ. ಕಠಿಣವಾದ ಕಾರ್ಯವನ್ನು ನೆರವೇರಿಸುವ ಕೌಶಲವನ್ನು ಇಂದು ತೋರಿಸಿ ಜಯವನ್ನು ಸಾಧಿಸಲಿದ್ದೀರಿ. ಒಟ್ಟಿನಲ್ಲಿ ಇಂದು ಶುಭದಿನ.

ಕಟಕ ಲೇವಾದೇವಿ, ಷೇರು ವ್ಯವಹಾರಕ್ಕೆ ಇಂದು ಕೈ ಹಾಕುವುದು ಬೇಡ. ಇದರಿಂದ ಲಾಭವು ಇಂದು ಇಲ್ಲ. ಕೌಟುಂಬಿಕ ಕೆಲಸಗಳಿಗೆ ಹೆಚ್ಚು ಲಕ್ಷ ನೀಡಿ. ಗೃಹೋಪಕರಣ ದುರಸ್ತಿ ಕಾರ್ಯಗಳು ಪ್ರಗತಿಯನ್ನು ಕಾಣಲಿದೆ.

ಸಿಂಹ ತೀರ್ಥಕ್ಷೇತ್ರದ ದರ್ಶನದ ಭಾಗ್ಯ ಇಂದು ಲಭಿಸಲಿದೆ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವ ಸಂದರ್ಭ ಬಂದು ಧನ್ಯತಾ ಭಾವವು ಹೆಚ್ಚಲಿದೆ. ಬಹುದಿನದ ಕನಸು ಇಂದು ಸಾಕಾರಗೊಂಡು ಅತೀ ಸಂತೋಷವನ್ನು ಹೊಂದಲಿದ್ದೀರಿ.

ಕನ್ಯಾ ಶ್ರಮವಿಲ್ಲದೇ ಕೆಲಸ-ಕಾರ್ಯಗಳು ನೆರವೇರಿ ಅಭಿವೃದ್ಧಿಯನ್ನು ಇಂದು ಹೊಂದಲಿದ್ದೀರಿ. ಸಾಮಾಜಿಕ ಕಾರ್ಯದಲ್ಲಿ ಎಲ್ಲರ ಸಹಕಾರ ದೊರಕಿ, ಮಹತ್ ಕಾರ್ಯವನ್ನು ಸಾಧಿಸುವ-ನಾಯಕತ್ವವನ್ನು ವಹಿಸಿಕೊಳ್ಳುವ ಸಾಧ್ಯತೆ ಇದೆ.

ತುಲಾ ಉದ್ಯೋಗ ಕ್ಷೇತ್ರದಲ್ಲಿ ತುಸು ತೊಡಕು ಇಂದು ಕಂಡು ಬರುತ್ತಿದ್ದು, ಇದನ್ನು ದೊಡ್ಡ ಸಂಗತಿಯೆಂದು ಭಾವಿಸುವದು ಬೇಡ. ದೇವತಾ ಶಕ್ತಿಯ ಆರಾಧನೆ ಬಲ ನಿಮ್ಮನ್ನು ಕಾಪಾಡಲಿದೆ. ಉದ್ಯೋಗ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ವರ್ತಿಸಿ ವಿಶೇಷವಾಗಿ ಪ್ರತಿಕ್ರಿಯೆ ನೀಡುವುದು ಬೇಡ.

ವೃಶ್ಚಿಕ ನಿರೀಕ್ಷೆಯನ್ನು ಕ್ರಯ-ವಿಕ್ರಯ ಕಾರ್ಯದಲ್ಲಿ ಲಾಭವು ದೊರಕಲಿದೆ. ಬೆಳ್ಳಿ-ಬಂಗಾರ ವ್ಯವಹಾರದಲ್ಲೂ ಕ್ಷೇಮವನ್ನು ಹೊಂದಲಿದ್ದೀರಿ. ಸಂಗಾತಿಯೊಂದಿಗೆ ವಿಶೇಷ ಪ್ರೀತಿ-ವಿಶ್ವಾಸವನ್ನು ತೋರಿಸುವ ನೀವು ಗೌರವವನ್ನು ಅದರಿಂದ ಪಡೆಯಲಿದ್ದೀರಿ.

ಧನು ವ್ಯಾಪಾರ-ವ್ಯವಹಾರದಲ್ಲಿ ವಿಘ್ನಗಳು ಬಂದು ಲಾಭ ಕುಗ್ಗಿ ಹೋಗುವ ಸಂದರ್ಭ ಉಂಟಾಗಲಿದೆ. ರಾಜಕೀಯ ವಿಚಾರಗಳಿಗೂ ಸ್ವಲ್ಪ ಹಿನ್ನಡೆಯನ್ನು ಕಾಣಲಿದ್ದೀರಿ. ನೆರೆಹೊರೆಯವರಿಂದ ಸೌಹಾರ್ದವನ್ನು ಕಾಯ್ದುಕೊಳ್ಳುವುದು ಅತೀ ಅಗತ್ಯ.

ಮಕರ ಅಡೆ-ತಡೆ ಇಲ್ಲದ ಕಾರ್ಯ. ಪ್ರಫುಲ್ಲಗೊಂಡ ಮನಸ್ಸು ಇಂದಿನ ವಿಶೇಷವಾಗಿರಲಿದೆ. ಇಚ್ಛಾಶಕ್ತಿಯು ಹೆಚ್ಚು ಜಾಗ್ರತವಾಗಿ ಕೆಲಸದಲ್ಲಿ ಸದೃಢತೆಯನ್ನು ಹೊಂದಲಿದ್ದೀರಿ. ಜತೆಗೆ ಯಶಸ್ಸನ್ನು ಕಾಣಲಿದ್ದೀರಿ. ಅಧ್ಯಾತ್ಮಿಕ ಭಾವವು ಹೆಚ್ಚಲಿದೆ.

ಕುಂಭ ಭೂಮಿ ವ್ಯವಹಾರದಿಂದ ಇಂದು ದೂರ ಉಳಿಯುವುದು ಲೇಸು. ನೆರೆಹೊರೆಯವರ ಸಹಕಾರದಿಂದ ಸಾಮಾಜಿಕ ಕಾರ್ಯವನ್ನು ನೆರವೇರಿಸಿ ಎಲ್ಲರ ಪ್ರೀತಿಗೆ ಪಾತ್ರರಾಗುತ್ತೀರಿ. ವಾಹನ ಖರೀದಿಯ ವಿಚಾರವು ಇಂದು ಬೇಡ. ಶೀತಬಾಧೆ ಬಗ್ಗೆ ಎಚ್ಚರ.

ಮೀನ ಮನೆಗೆ ಇಷ್ಟ ಮಿತ್ರರ ಆಗಮನ. ಹೊಸ ವಿಚಾರಗಳ ಬಗ್ಗೆ ಅವರೊಂದಿಗೆ ಚರ್ಚೆ. ಇದರಿಂದ ಉದ್ಯೋಗ ಕ್ಷೇತ್ರದಲ್ಲಿ ಲಾಭವನ್ನು ಹೊಂದುವ ಬಯಕೆ ಉಂಟಾಗಲಿದೆ. ಗ್ರಹಾನುಕೂಲತೆಯಿಂದ ಈ ಎಲ್ಲವೂ ಸುಲಭವಾಗಿ ನೆರವೇರಿ ಯಶಸ್ಸನ್ನು ಹೊಂದಲಿದ್ದೀರಿ.

ಸಿಎಂಆರ್ ವಿವಿ ಕ್ಯಾಂಪಸ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಕಿವಿಮಾತು

ಯುವಕರು ವಿಶ್ವ ಪ್ರಜೆಗಳಾಗಿ ಹೊರಹೊಮ್ಮಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

‘ಪ್ರಾಚೀನ ಭಾರತವು ವೈದ್ಯ ಪದ್ಧತಿ, ಐತಿಹಾಸಿಕ ಪರಂಪರೆ ಹಾಗೂ ಶಿಕ್ಷಣ ಪದ್ಧತಿ ಮೂಲಕ ‘ವಿಶ್ವಗುರು’ವಾಗಿ ಗುರುತಿಸಿಕೊಂಡಿದೆ. ಈ ನಿಟ್ಟಿನಲ್ಲಿ ದೇಶದ ಯುವಕರು ಜ್ಞಾನಾರ್ಜನೆಯ ಮೂಲಕ ‘ವಿಶ್ವ ಪ್ರಜೆ’ಗಳಾಗಿ ಹೊರಹೊಮ್ಮಬೇಕು ಎಂದು ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಹೆಣ್ಣೂರು ರಸ್ತೆಯಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಾಚೀನ ಭಾರತೀಯ ಶಿಕ್ಷಣವು ವೇದಗಳಿಂದ ಹುಟ್ಟಿಕೊಂಡಿದೆ. ನಮ್ಮದ್ದು ಪ್ರಬುದ್ಧ ಸಂಸ್ಕೃತಿ, ಉತ್ತಮ ಜ್ಞಾನ ಮತ್ತು ಬುದ್ಧಿವಂತಿಕೆಯ ಅತ್ಯುತ್ತಮ ಅಭಿವ್ಯಕ್ತಿಯಾಗಿದೆ. ಒಂದು ಕಾಲದಲ್ಲಿ ಭಾರತವು ‘ವಿಶ್ವಗುರು’ ಎಂದು ಗುರುತಿಸಲ್ಪಟ್ಟಿದೆ ಮತ್ತು ಬುದ್ಧಿವಂತಿಕೆಯ ಒಂದು ಸ್ಥಾನವನ್ನು ಪಡೆದಿದೆ. ಇದೇ ದಿಕ್ಕಿನಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಕ್ರೀಡಾ ವಲಯ ಹಾಗೂ ತಂತ್ರಜ್ಞಾನ ಕಲಿಕೆಯಲ್ಲಿ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಬೇಕು. ಹೊಸ ಹೊಸ ಆವಿಷ್ಕಾರಗಳನ್ನು ಕಂಡುಹಿಡಿಯುವ ಮೂಲಕ ವಿಶ್ವ ಪ್ರಜೆಗಳಾಗಿ ಬಾಳಬೇಕು ಎಂದು ಹೇಳಿದರು.

ದೇಶವು ಈ ಹಿಂದಿನಿಂದಲೂ ಕೂಡ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಒದಗಿಸಿದೆ. ಇದಕ್ಕೆ ನಳಂದ, ತಕ್ಷಶಿಲ ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಣ ಪದ್ಧತಿ ಸಾಕ್ಷಿ. ಪ್ರಸ್ತುತ ಕೇಂದ್ರ ಸರಕಾರ ಸೇರಿದಂತೆ ಸ್ಥಳೀಯ ಸರಕಾರಗಳು ಕೂಡ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣವನ್ನು ಇನ್ನೂ ಹೆಚ್ಚಿನದಾಗಿ ಪ್ರೋತ್ಸಾಹಿಸಬೇಕಿದೆ ಎಂದು ತಿಳಿಸಿದರು.

ಭಾರತವು ಜಾಗತಿಕ ಮಟ್ಟದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ರಕ್ಷಣಾ ವಲಯದಲ್ಲಿ ಸದೃಢವಾಗಿದೆ. ವಿಶ್ವದಲ್ಲಿಯೇ ಅತ್ಯಧಿಕ ವಿಶ್ವವಿದ್ಯಾಲಯಗಳನ್ನು ಹೊಂದಿದ್ದೇವೆ. ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದೇವೆ. ಆದರೆ, ದೇಶದ ಶಿಕ್ಷಣ ವ್ಯವಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಮಟ್ಟಕ್ಕೆ ಅಭಿವೃದ್ಧಿ ಸಾಧಿಸಿಲ್ಲ ಎಂದು ಹೇಳಿದರು.

ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ ಡಾ. ಕೆ.ಪಿ.ಗೋಪಾಲಕೃಷ್ಣ ಮಾತನಾಡಿ, ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು 1991ರಲ್ಲಿ ವಿತ್ತ ಸಚಿವರಾಗಿದ್ದ ಸಂದರ್ಭದಲ್ಲಿ ಉದಾರೀಕರಣಕ್ಕೆ ಒತ್ತು ನೀಡಿದ್ದರು. ಇದರಿಂದ ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಸ್ಥಾಪನೆಯಿಂದ ಐಟಿ ವಲಯ ಬೆಳವಣಿಗೆಯಾಗಿದೆ. ಆದರೆ, ಇತ್ತೀಚಿನ ಸರಕಾರಗಳು ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕ ಅನುದಾನ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಗರದ ಹೆಣ್ಣೂರು ರಸ್ತೆಯಲ್ಲಿ ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ಗೆ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಚಾಲನೆ ನೀಡಿದರು. ರಾಜ್ಯ ಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, ಸಿಎಂಆರ್ ವಿವಿ ಕುಲಪತಿ ಡಾ. ಸಬಿತಾ ರಾಮಮೂರ್ತಿ, ಸಂಸದ ಪಿ.ಸಿ.ಮೋಹನ್ ಮತ್ತಿತರರು ಇದ್ದರು.

> **ದೇಶವು ಶೇ. 50ರಷ್ಟು ಕೃಷಿ ಅವಲಂಬಿಸಿದೆ. ಕೃಷಿಯಲ್ಲಿ ಹೊಸ ಹೊಸ ತಂತ್ರಜ್ಞಾನಗಳು ಹಾಗೂ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಅಭಿವೃದ್ಧಿ ಸಾಧಿಸಬೇಕಿದೆ. ಸಂಶೋಧನಾ ವಿದ್ಯಾರ್ಥಿಗಳು ಕೃಷಿ ಕ್ಷೇತ್ರಕ್ಕೆ ಅಗತ್ಯವಾದ ತಂತ್ರಜ್ಞಾನಗಳ ಅಭಿವೃದ್ಧಿಗೆ ಮುಂದಾಗಬೇಕು.**
> - **ವೆಂಕಯ್ಯ ನಾಯ್ಡು** ಉಪ ರಾಷ್ಟ್ರಪತಿ

ಭಾರತ ವಿಶ್ವದಲ್ಲೇ ಅತಿ ದೊಡ್ಡ ಆರ್ಥಿಕ ರಾಷ್ಟ್ರ

ಇಡೀ ಪ್ರಪಂಚ ಇಂದು ಭಾರತದ ಕಡೆಗೆ ನೋಡುತ್ತಿದೆ. ವಿಶ್ವದ ಆರ್ಥಿಕತೆಯಲ್ಲಿ ಭಾರತ ದೊಡ್ಡ ಶಕ್ತಿಯಾಗಿ ಹೊರ ಹೊಮ್ಮುವ ಲಕ್ಷಣಗಳು ಗೋಚರಿಸಿವೆ. ವಿಶ್ವ ಬ್ಯಾಂಕ್ ಮತ್ತು ಮೂಡೀಸ್ ರೇಟಿಂಗ್ ಸ್ಕೇಲ್ ಆಧಾರದ ಮೇಲೆ ಶೀಘ್ರದಲ್ಲೇ ಭಾರತ ವಿಶ್ವದ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಲಿದೆ.

ಭಾರತದ ಜನಸಂಖ್ಯೆಯಲ್ಲಿ ಶೇ.65ರಷ್ಟು ಯುವಕರಿದ್ದಾರೆ. ಭಾರತದ ಯುವ ಶಕ್ತಿಯನ್ನು ಕ್ರಿಯಾಶೀಲಗೊಳಿಸಿದರೆ ಭಾರತ ವಿಶ್ವದಲ್ಲಿ ಎಲ್ಲ ರಂಗದಲ್ಲೂ ಮುಂಚೂಣಿಯಲ್ಲಿರಲಿದೆ. ಪೋಷಕರು ಹಾಗೂ ಅಧ್ಯಾಪಕರು ಮಕ್ಕಳನ್ನು ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಬೇಡಿ. ಶಿಕ್ಷಣ ಪಡೆಯುವುದು ಉದ್ಯೋಗ ಪಡೆಯುವುದಕ್ಕೆ ಎಂಬ ಭಾವನೆಯನ್ನು ಬಿಡಿ. ಜ್ಞಾನ ಸಂಪಾದನೆಗಾಗಿ ಎಂಬುದನ್ನು ಅರಿತು ಯೋಗ, ಆಹಾರ ಪದ್ಧತಿ ಹಾಗೂ ಕ್ರೀಡಾ ಚಟುವಟಿಕೆಗಳ ಬಗ್ಗೆ ಆಸಕ್ತಿ ಬೆಳೆಸಿ ಎಂದು ವೆಂಕಯ್ಯ ನಾಯ್ಡು ಹೇಳಿದರು.

ಮಾತೃಭಾಷೆ ಕಡೆಗಣಿಸದಿರಿ

ಜಗತ್ತಿನ ಯಾವುದೇ ಭಾಗದಲ್ಲಿಯಾದರೂ ಜೀವಿಸಿ. ಆದರೆ, ಮಾತೃ ಹಾಗೂ ಮಾತೃಭೂಮಿಯನ್ನು ಮರೆಯಬೇಡಿ. ಪಾಶ್ಚಿಮಾತ್ಯ ಸಂಸ್ಕೃತಿ, ಆಹಾರ ಪದ್ಧತಿ ಹಾಗೂ ಪರಭಾಷೆಗಳ ಮೋಹಕ್ಕೆ ಒಳಗಾಗಬೇಡಿ. ಕನ್ನಡ ನೆಲವು ಸಂಸ್ಕೃತಿ ಹಾಗೂ ಪರಂಪರೆ, ಶ್ರೀಮಂತಿಕೆಯನ್ನು ಹೊಂದಿದೆ. ಇಲ್ಲಿನ ಆಹಾರ ಪದ್ಧತಿ ಆರೋಗ್ಯಕ್ಕೆ ಯೋಗ್ಯವಾಗಿದೆ. ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರವಾಗಿದೆ ಎಂದು ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ತಿಳಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ಅಧಿಕಾರಿಗಳಲ್ಲಿ ಹೆದರಿಕೆ

ಬೆಂಗಳೂರು: ಪಿಎಸ್‌ಐ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಸಂಬಂಧ ಸಿಸಿಬಿ ತನ್ನ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದು, ಈ ಹಿನ್ನೆಲೆ ಹಲವು ಪಿಎಸ್‌ಐ ಹಾಗೂ ಇತರ ಅಧಿಕಾರಿಗಳ ಎದೆಯಲ್ಲಿ ಹೆದರಿಕೆ ಶುರುವಾಗಿದೆ. ಸೋರಿಕೆಯಾದ ಪ್ರಶ್ನೆಪತ್ರಿಕೆಗಳನ್ನೇ ಬಳಸಿಕೊಂಡು ಹಲವು ಅಧಿಕಾರಿಗಳು ಇಲಾಖೆಯಲ್ಲಿ ಕೆಲಸ ಗಿಟ್ಟಿಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಅಕ್ರಮವಾಗಿ ಆಯ್ಕೆಯಾಗಿರುವ ಅಧಿಕಾರಿಗಳಿಗಾಗಿ ಸಿಸಿಬಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಈಗಾಗಲೇ ಸಿಸಿಬಿ ಹೆಚ್ಚುವರಿ ಆಯುಕ್ತ ಅಲೋಕ್ ಕುಮಾರ್ ಮತ್ತು ತಂಡ ಅಕ್ರಮವಾಗಿ ಆಯ್ಕೆಯಾದವರ ಪಟ್ಟಿಯನ್ನು ಸಿದ್ಧಪಡಿಸಿದೆ. 2005, 2007, 2009ರಲ್ಲಿ ನಡೆದ ಆರ್‌ಎಫ್‌ಐ, ಎಫ್‌ಡಿಎ, ಎಸ್‌ಡಿಎ ಸೇರಿದಂತೆ ಹಲವು ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಶಂಕೆ ವ್ಯಕ್ತವಾಗಿತ್ತು. ಈ ಬಗ್ಗೆ ವಿಚಾರಣೆ ವೇಳೆ ಆರೋಪಿ ಬಸವರಾಜ್ ಒಪ್ಪಿಕೊಂಡಿದ್ದಾನೆ. ಬಸವರಾಜ್ ಹೇಳಿಕೆ ಹಿನ್ನೆಲೆಯಲ್ಲಿ ಸಿಸಿಬಿ ಅಧಿಕಾರಿಗಳು ದಾಖಲೆಗಳ ಸಂಗ್ರಹಕ್ಕೆ ಮುಂದಾಗಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಮತದಾನದ ವೇಳೆ ಗಲಾಟೆ ಪುಂಡನಿಗೆ ಪಿಎಸ್‌ಐ ಡಿಚ್ಚಿ

ಬೆಂಗಳೂರು: ಶಿವಾಜಿ ನಗರದ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಪುಂಡರು ಹಾಗೂ ಪೊಲೀಸರ ನಡುವೆ ಗಲಾಟೆ ನಡೆದು ಪಿಎಸ್‌ಐ ಒಬ್ಬರು ಪುಂಡನಿಗೆ ಡಿಚ್ಚಿ ಹೊಡೆದಿದ್ದು, ಇದರ ವಿಡಿಯೊ ವೈರಲ್ ಆಗಿದೆ. ಶಿವಾಜಿನಗರದ ಗುಲ್ಷನ್ ಶಾದಿ ಮಹಲ್ ಕಮಿಟಿಗೆ ಎಲೆಕ್ಷನ್ ನಡೆಯಿತು. ಈ ವೇಳೆ ಎಲೆಕ್ಷನ್ ಮುಗಿದ ಮೇಲೆ ಮತದಾನ ನಡೆಯುತ್ತಿದ್ದ ಸ್ಥಳದಲ್ಲಿದ್ದ ಸಾರ್ವಜನಿಕರಿಗೆ ಅಲ್ಲಿಂದ ತೆರಳುವಂತೆ ಹೇಳಿದರು. ಇಷ್ಟಕ್ಕೇ ರೊಚ್ಚಿಗೆದ್ದ ಕೆಲ ಪುಂಡರು ‘ನಮಗೇ ಹೋಗು ಅಂತಾ ಹೇಳ್ತಿಯಾ’ ಎಂದು ಇನ್‌ಸ್ಪೆಕ್ಟರ್ ಮೇಲೆಯೇ ಗಲಾಟೆ ಮಾಡಿದ್ದಾರೆ. ಆ ವೇಳೆ ಮಾತಿಗೆ ಮಾತು ಬೆಳೆದು ಪುಂಡರು, ಕಮರ್ಷಿಯಲ್ ಸ್ಟ್ರೀಟ್ ಠಾಣೆಯ ಇನ್‌ಸ್ಪೆಕ್ಟರ್ ನಾಗರಾಜ್ ಅವರಿಗೆ ಆವಾಜ್ ಹಾಕಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ಪಿಎಸ್‌ಐ ಕಿರಣ್, ಪುಂಡ ಯುವಕರ ಜತೆ ವಾಗ್ವಾದ ನಡೆಸಿ, ಕೊನೆಗೆ ಪುಂಡನಿಗೆ ಡಿಚ್ಚಿ ಹೊಡೆದಿದ್ದಾರೆ. ಪೊಲೀಸರು ಹಾಗೂ ಯುವಕರ ನಡುವೆ ವಾಗ್ವಾದ ನಡೆದಿರುವ ವಿಡಿಯೊ ಇದೀಗ ವೈರಲ್ ಆಗಿದೆ.

ಮಗನ ಮೇಲೆ ತಂದೆ ಹಲ್ಲೆ

ಬೆಂಗಳೂರು: ಜೂಜಾಟದಲ್ಲಿ ಹಣ ಕಳೆದುಕೊಂಡ ಮಗನ ಮೇಲೆ ತಂದೆ ಹಲ್ಲೆ ನಡೆಸಿರುವ ಘಟನೆ ಗಿರಿನಗರದ ದ್ವಾರಕ ನಗರದಲ್ಲಿ ಶನಿವಾರ ರಾತ್ರಿ ನಡೆದಿದೆ. ಗಾಯಗೊಂಡಿರುವ ಆಟೋ ಚಾಲಕ ಸಂತೋಷ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಜೂಜಾಟದಲ್ಲಿ ಸಂತೋಷ್ ಒಂದು ಲಕ್ಷ ರುಪಾಯಿ ಕಳೆದುಕೊಂಡಿದ್ದರಿಂದ ಆಕ್ರೋಶಗೊಂಡ ತಂದೆ ರಾಜಣ್ಣ ಬೀಗದ ಕೈನಿಂದ ತಲೆಗೆ ಚುಚ್ಚಿದ್ದಾರೆ. ಕೀ ಆಳಕ್ಕೆ ಇಳಿದು ರಕ್ತ ಸೋರುತ್ತಿದ್ದ ಸಂತೋಷ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಗಿರಿನಗರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಗಾಂಜಾ ಮಾರಾಟ: ಬಂಧನ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಒಡಿಶಾ ಮೂಲದ 7 ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ. ಸುಜಿತ್, ಅರ್ಜುನ್, ಅಜಿತ್, ವೇದವ್ಯಾಸ್, ರಾಘವ್, ವಿಕ್ರಂ ಹಾಗೂ ಅಜಿತ್ ಕೊಹರ್ ಬಂಧಿತ ಆರೋಪಿಗಳು. ಬಾಣಸಾವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಸರ್ಕಲ್ ಬಳಿ ಶನಿವಾರ ಸಾರ್ವಜನಿಕರಿಗೆ ಗಾಂಜಾ ಮಾರಾಟ ಮಾಡುತ್ತಿರುವ ವಿಚಾರವನ್ನು ಸ್ಥಳೀಯರು ಪೊಲೀಸರಿಗೆ ತಿಳಿಸಿದ್ದು, ಇದನ್ನು ಆಧರಿಸಿ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ 39 ಕಿ.ಲೋ ತೂಕದ 19 ಲಕ್ಷ ಮೌಲ್ಯದ ಗಾಂಜಾ ವಶಕ್ಕೆ ಪಡೆದಿದ್ದು, ಎನ್‌ಡಿಪಿಎಸ್ ಕಾಯಿದೆಯಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಪ್ರಾಮಾಣಿಕತೆ ಮೆರೆದ ಎಎಸ್‌ಐ

ಬೆಂಗಳೂರು: ಮಹಿಳೆಯರು ಕಳೆದುಕೊಂಡಿದ್ದ ಹಣ, ವಸ್ತುಗಳನ್ನು ಹಿಂದಿರುಗಿಸಿದ ಸಂಚಾರಿ ವಿಭಾಗದ ಎಎಸ್‌ಐ ಅಣ್ಣಯ್ಯಪ್ಪ ಅವರ ಪ್ರಾಮಾಣಿಕತೆಗೆ ಡಿಸಿಪಿ ಸೌಮ್ಯಲತಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಡಿಕೇಟ್ ಬ್ಯಾಂಕ್ ಸಮೀಪ ಇಬ್ಬರು ಮಹಿಳೆಯರು ಮೊಬೈಲ್, ಚಿನ್ನದ ಉಂಗುರ ಹಾಗೂ 3200 ನಗದು ಕಳೆದುಕೊಂಡಿದ್ದರು. ಈ ವಸ್ತುಗಳನ್ನು ಜಯನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಎಸ್‌ಐ. ಅಣ್ಣಯ್ಯಪ್ಪ ಅವರು ಇಬ್ಬರು ಮಹಿಳೆಯರಿಗೆ ಹಿಂದಿರುಗಿಸಿ ತಮ್ಮ ಪ್ರಾಮಾಣಿಕತೆ ಮೆರೆದಿದ್ದಾರೆ. ಈ ಕುರಿತು ಬೆಂಗಳೂರು ಪಶ್ಚಿಮ ವಿಭಾಗದ ಡಿಸಿಪಿ (ಸಂಚಾರಿ) ಸೌಮ್ಯಲತಾ ಎಸ್.ಕೆ ತಮ್ಮ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಅಣ್ಣಯ್ಯಪ್ಪನವರ ಈ ಕೆಲಸಕ್ಕೆ ಟ್ವಿಟ್ಟಿಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಗದು ಮತ್ತು ವಸ್ತುಗಳನ್ನು ಹಿಂದಿರುಗಿಸುತ್ತಿರುವ ಎಎಸ್‌ಐ ಅಣ್ಣಯ್ಯಪ್ಪ.

ಸಮಾನ ವೇತನ, ಸೇವಾ ಭದ್ರತೆ ನೀಡುವಂತೆ ಒತ್ತಾಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಮಾನ ವೇತನ ಹಾಗೂ ಸೇವಾ ಭದ್ರತೆ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ ಮತ್ತು ಹೊರ ಗುತ್ತಿಗೆ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ.

ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ 30 ಸಾವಿರಕ್ಕೂ ಹೆಚ್ಚು ಗುತ್ತಿಗೆ ನೌಕರರು ಹಗಲಿರುಳು ಎನ್ನದೇ ಶ್ರಮವಹಿಸಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಸರಕಾರ ನಮಗೆ ತಾರತಮ್ಯ ಮಾಡುತ್ತಿದ್ದು, ಕಾಯಂ ನೌಕರರ ಸರಿಸಮಾನವಾಗಿಯೇ ಕೆಲಸ ಮಾಡುತ್ತಿದ್ದರೂ ಸರಿಯಾದ ವೇತನ ನೀಡುತ್ತಿಲ್ಲ. ಸಮಾನ ವೇತನ ನೀಡುವಲ್ಲಿ ತಾರತಮ್ಯ ಮಾಡುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಬಗ್ಗೆ ಸಂಘದ ಅಧ್ಯಕ್ಷ ಎಚ್.ವೈ. ವಿಶ್ವಾರಾಧ್ಯ ಮಾತನಾಡಿ, ದೆಹಲಿ ಮತ್ತು ಹರಿಯಾಣ ಸರಕಾರ ಎಲ್ಲ ಬಗೆಯ ಗುತ್ತಿಗೆ ನೌಕರರಿಗೆ ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಸಮಾನ ವೇತನ ಹಾಗೂ ಸೇವಾ ಭದ್ರತೆ ಒದಗಿಸಲು ಕ್ರಮ ಕೈಗೊಂಡಿದೆ. ಅದೇ ಮಾದರಿಯನ್ನು ರಾಜ್ಯದಲ್ಲೂ ಅನುಸರಿಸಿ, ಗುತ್ತಿಗೆ ನೌಕರರಿಗೆ ನಿವೃತ್ತಿವರೆಗೂ ಸೇವಾ ಭದ್ರತೆ ಒದಗಿಸಬೇಕು ಎಂದು ಮನವಿ ಮಾಡಿದರು.

ಪ್ರಸಕ್ತ ಸಾಲಿನ ಬಜೆಟ್‌ನಲ್ಲೂ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ನಿರ್ಲಕ್ಷಿಸಲಾಗಿದೆ. ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಒಳಗುತ್ತಿಗೆ ನೌಕರರನ್ನು ಹೊರಗುತ್ತಿಗೆಗೆ ದೂಡಬಾರದು. ಹಾಲಿ ಗುತ್ತಿಗೆ ವ್ಯವಸ್ಥೆಯಲ್ಲಿರುವ ಹುದ್ದೆಗಳನ್ನು ಕಾಯಂ ಮಾಡಿಕೊಳ್ಳುವವರೆಗೆ ಧರಣಿ ಮುಂದುವರಿಯಲಿದೆ ಎಂದು ತಿಳಿಸಿದರು.

ಕರ್ನಾಟಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ ನೌಕರರು ಸಮಾನ ವೇತನ ಮತ್ತು ಸೇವಾ ಭದ್ರತೆ ನೀಡಬೇಕೆಂದು ಆಗ್ರಹಿಸಿ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿದರು.

ಗುತ್ತಿಗೆ ಪದ್ಧತಿ ಅಸಂವಿಧಾನಿಕ !

ಸರಕಾರಿ ನೌಕರರಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸೆ ನೀಡುವ ಜ್ಯೋತಿ ಸಂಜೀವಿನಿ ಯೋಜನೆಯು ಇಲಾಖೆಯಲ್ಲಿಯೇ ಕೆಲಸ ಮಾಡುವ ಗುತ್ತಿಗೆ ನೌಕರರಿಗೆ ಇಲ್ಲವಾಗಿದೆ. ಅದನ್ನು ಗುತ್ತಿಗೆ ನೌಕರರಿಗೆ ಜಾರಿಗೊಳಿಸಬೇಕು. ಜೀತ ಪದ್ಧತಿಯ ಪರಿಷ್ಕೃತ ರೂಪದಂತಿರುವ ಗುತ್ತಿಗೆ ಪದ್ಧತಿಯೇ ಅಸಂವಿಧಾನಿಕವಾಗಿದೆ. ಕಾರ್ಮಿಕರನ್ನು ದುಡಿಸಿಕೊಂಡು ವಯಸ್ಸಾಗುತ್ತಿದ್ದಂತೆ ಕೆಲಸದಿಂದ ಕಿತ್ತೊಗೆಯುವುದು ಸರಿಯಲ್ಲ ಎಂದು ಸಂಘದ ಅಧ್ಯಕ್ಷ ಎಚ್.ವೈ.ವಿಶ್ವಾರಾಧ್ಯ ಆಕ್ರೋಶ ವ್ಯಕ್ತಪಡಿಸಿದರು.

ವೇಶ್ಯಾವಾಟಿಕೆ ಇಬ್ಬರ ಬಂಧನ

ಬೆಂಗಳೂರು: ಹೊರ ರಾಜ್ಯದಿಂದ ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿ ಮೂವರು ಯುವತಿಯರನ್ನು ರಕ್ಷಿಸಿದ್ದಾರೆ. ಬಾಗಲೂರಿನ ಮುನೇಶ್ವರ ಲೇಔಟ್‌ನ ಸುಧೀರ್(32), ಸಾತನೂರಿನ ಸೂಚನ್ ಗೌಡ (29) ಬಂಧಿತರು. ಆರೋಪಿಗಳು ಕಟ್ಟಿಗೇನಹಳ್ಳಿ ಗೇಟ್‌ನ ರಾಮಣ್ಣ ಗಾರ್ಡನ್‌ನ ಪ್ರಿನ್ಸ್ ಇನ್ ಲಾಡ್ಜ್ ವೊಂದರಲ್ಲಿ ಹೊರರಾಜ್ಯದಿಂದ ಉದ್ಯೋಗ ಕೊಡಿಸುವುದಾಗಿ ಕರೆತಂದಿದ್ದ ಯುವತಿಯ ರನ್ನು ಇಟ್ಟುಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ವಿಶ್ವವಾಣಿ
ಪತ್ರಿಕೆ ಬರುತ್ತಿಲ್ಲವೇ?
ಆತ್ಮೀಯ ಓದುಗರೇ, ವಿಶ್ವವಾಣಿ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆಯ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
ಪ್ರಸರಣ ವಿಭಾಗ
6362393959
circulation@vishwavani.news

ಸಿರ್ಸಿ ಮೇಲ್ಸೇತುವೆಯ ಒಂದು ಭಾಗ ಸಂಚಾರಕ್ಕೆ ಮುಕ್ತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಬಾಲಗಂಗಾಧರನಾಥ ಮಹಾಸ್ವಾಮೀಜಿ(ಸಿರ್ಸಿ) ಮೇಲ್ಸೇತುವೆಯಲ್ಲಿ ಕೈಗೊಂಡಿದ್ದ ಮರು ಡಾಂಬರೀಕರಣ ಕಾಮಗಾರಿಯ ಒಂದು ಭಾಗ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ರಸ್ತೆಯನ್ನು ಮುಕ್ತಗೊಳಿಸಿದ್ದು, ಬಿಬಿಎಂಪಿ ಶೀಘ್ರವೇ ಮತ್ತೊಂದು ರಸ್ತೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಿದೆ.

ಮೇಲ್ಸೇತುವೆ ದುರಸ್ತಿ ಕಾಮಗಾರಿ ಕೈಗೊಳ್ಳಲು ಮುಂದಾಗಿದ್ದ ಪಾಲಿಕೆ ಕಳೆದೊಂದು ತಿಂಗಳಿಂದ ಕಾಮಗಾರಿ ನಡೆಸಿದ್ದು, ಇದೇ ಮೊದಲ ಬಾರಿಗೆ ಅತ್ಯಾಧುನಿಕ ಟಿಕ್ಕಿಟಾರ್ ಬಳಸಿ ಮರು ಡಾಂಬರೀಕರಣ ಮಾಡಲಾಗಿದೆ. ಇದೀಗ ಟೌನ್‌ಹಾಲ್‌ನಿಂದ ಮೈಸೂರು ರಸ್ತೆವರೆಗಿನ ರಸ್ತೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಮೈಸೂರು ರಸ್ತೆಯಿಂದ ನಗರದ ಕಡೆಗಿನ ರಸ್ತೆಯಲ್ಲಿ ಮರು ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮತಿ ಕೋರಿರುವ ಅಧಿಕಾರಿಗಳು, ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಪರ್ಯಾಯ ರಸ್ತೆಗಳನ್ನು ಕಲ್ಪಿಸುವಂತೆ ಸಂಚಾರ ಪೊಲೀಸರನ್ನು ಕೋರಿದ್ದಾರೆ. ಅದರಂತೆ ಪೊಲೀಸರು ಕಾಮಗಾರಿಗೆ ಅನುಮತಿ ನೀಡಿದ ಕೂಡಲೇ ಕಾಮಗಾರಿ ಆರಂಭಿಸಲು ಅಧಿಕಾರಿಗಳು ಯೋಜನೆ ರೂಪಿಸಿದ್ದಾರೆ.

ಮೈಸೂರು ರಸ್ತೆಯಿಂದ ನಗರದ ಕಡೆಗಿನ ರಸ್ತೆಯಲ್ಲಿ ಎರಡು ಹಂತಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಮೊದಲ ಹಂತದಲ್ಲಿ ಗೂಡ್ಸ್‌ಶೆಡ್ ರಸ್ತೆ ಕಡೆಗಿನ ರ್‍ಯಾಂಪ್‌ನಿಂದ ಮೇಲ್ಸೇತುವೆ ಕೊನೆಗೊಳ್ಳುವವರೆಗೆ ಕಾಮಗಾರಿ ನಡೆಸಲಾಗುತ್ತದೆ. ಆನಂತರದಲ್ಲಿ ಸಂಪೂರ್ಣ ರಸ್ತೆಯಲ್ಲಿ ಕಾಮಗಾರಿ ನಡೆಸಲು ಉದ್ದೇಶಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಭೆ ಸಮಾರಂಭ

‘ಆಶ್ರಮಕರ್ಮಾಣಿ’ ಉಪನ್ಯಾಸ ಕಾರ್ಯಕ್ರಮ
ಉಪಸ್ಥಿತಿ: ಡಾ. ಕೆ.ಜಿ.ಸುಬ್ರಾಯ ಶರ್ಮಾ
ಆಯೋಜನೆ: ಪರಮಾರ್ಥ ವಿಚಾರ ಸಂಘ ಟ್ರಸ್ಟ್
ಸ್ಥಳ: ಅಧ್ಯಾತ್ಮ ಮಂದಿರ, ವಿ.ವಿ.ಪುರ
ಸಮಯ: ಬೆಳಗ್ಗೆ 7.45

‘ಮೂರ್ತಂ, ಅಮೂರ್ತಂ’ ಉಪನ್ಯಾಸ ಕಾರ್ಯಕ್ರಮ
ಉಪಸ್ಥಿತಿ: ಡಾ. ಕೆ.ಜಿ.ಸುಬ್ರಾಯ ಶರ್ಮಾ
ಆಯೋಜನೆ: ವೇದಾಂತ ಸತ್ಸಂಗ ಕೇಂದ್ರ
ಸ್ಥಳ: ಸಾಕಮ್ಮ ಗಾರ್ಡನ್ಸ್, ವೇದಾಂತ ನಿಲಯ, ಬಸವನಗುಡಿ
ಸಮಯ: ಬೆಳಗ್ಗೆ 9

30ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ 2019 ಸಮಾರೋಪ ಸಮಾರಂಭ

ಆಯೋಜನೆ: ಸಾರಿಗೆ ಇಲಾಖೆ
ಉಪಸ್ಥಿತಿ: ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ
ಗೌರವ ಅತಿಥಿ: ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್, ಗೃಹ ಸಚಿವ ಎಂ.ಬಿ.ಪಾಟೀಲ್
ಉದ್ಘಾಟನೆ: ಸಾರಿಗೆ ಸಚಿವ ಡಿ.ಸಿ.ತಮ್ಮಣ್ಣ
ಅಧ್ಯಕ್ಷತೆ: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್
ಸ್ಥಳ: ಪುಟ್ಟಣ್ಣ ಚೆಟ್ಟಿ ಪುರಭವನ, ಜೆಸಿ ರಸ್ತೆ
ಸಮಯ: ಬೆಳಗ್ಗೆ 11

ಕನ್ನಡ ಪುಸ್ತಕ ಮಾರಾಟ ಮೇಳ
ಉಪಸ್ಥಿತಿ: ಡಾ. ಎಚ್.ಎಸ್.ವೆಂಕಟೇಶಮೂರ್ತಿ, ಪ್ರೊ. ಎಸ್.ಜಿ.ಸಿದ್ದರಾಮಯ್ಯ
ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆಸಿ ರಸ್ತೆ
ಸಮಯ: ಬೆಳಗ್ಗೆ 11

ಅಂತಾರಾಷ್ಟ್ರೀಯ ಸಮಾವೇಶ
ಆಯೋಜನೆ: ಐಪಿಐಆರ್‌ಟಿ
ಸ್ಥಳ: ಐಪಿಐಆರ್‌ಟಿಯ ಕಾನ್ಫರೆನ್ಸ್ ಹಾಲ್
ಸಮಯ: ಬೆಳಗ್ಗೆ 11.30

ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಪುಸ್ತಕಗಳ ಲೋಕಾರ್ಪಣೆ
ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ
ಪುಸ್ತಕ ಲೋಕಾರ್ಪಣೆ: ಉಪಮುಖ್ಯ ಮಂತ್ರಿ ಡಾ. ಜಿ.ಪರಮೇಶ್ವರ್

ಪ್ರಶಸ್ತಿ ಪುರಸ್ಕೃತರ ಪರಿಚಯ: ಜಲಸಂಪನ್ಮೂಲ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಡಿ.ಕೆ.ಶಿವಕುಮಾರ್
ಅಧ್ಯಕ್ಷತೆ: ವಿಧಾನಸಭಾ ಸದಸ್ಯ ಆರ್. ರೋಷನ್ ಬೇಗ್
ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ
ಸ್ಥಳ: ಡಾ. ಬಿ.ಆರ್.ಅಂಬೇಡ್ಕರ್ ಭವನ, ವಸಂತ ನಗರ
ಸಮಯ: ಸಂಜೆ 5.30

ಸಾಂಸ್ಕೃತಿಕ ಕಾರ್ಯಕ್ರಮ
ಯಕ್ಷಗಾನ: ಸುಧನ್ವ ಕಾಳಗ ಗಾನ ಸೌರಭ ಯಕ್ಷಗಾನ ಶಾಲೆ
ಆಯೋಜನೆ: ಕರ್ನಾಟಕ ಯಕ್ಷಗಾನ ಅಕಾಡೆಮಿ
ಸ್ಥಳ: ಪುಸ್ತಕ ಮಾರಾಟ ಮಳಿಗೆ ಆವರಣ
ಸಮಯ: ಸಂಜೆ 6

ಭಜನೆ
ಆಯೋಜನೆ: ಸಾಯಿ ಗೀತಾಂಜಲಿ
ಸ್ಥಳ: 2ನೇ ಹಂತ, 8ನೇ ಅಡ್ಡರಸ್ತೆ, ಶ್ರೀ ಸತ್ಯಸಾಯಿ ಸೇವಾ ಕ್ಷೇತ್ರ, ಜೆ.ಪಿ.ನಗರ
ಸಮಯ: ಸಂಜೆ 6

ಊಟ ನಮ್ಮ ಆಯ್ಕೆ; ತಿನ್ನುವ ಸ್ವಾತಂತ್ರ್ಯ ವೈಜ್ಞಾನಿಕತೆ ಕುರಿತ ದತ್ತಿ ಉಪನ್ಯಾಸ
ಉಪಸ್ಥಿತಿ: ಡಾ. ಬಿ.ಎಲ್.ಸ್ವಾಮಿ
ದತ್ತಿ ಉಪನ್ಯಾಸ: ಡಾ. ಟಿ.ಎಸ್.ಚನ್ನೇಶ್
ಆಯೋಜನೆ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ
ಸ್ಥಳ: ಡಿವಿಜಿ ಸಭಾಂಗಣ, ಬಸವನಗುಡಿ
ಸಮಯ: ಸಂಜೆ 6.30

ಭಜನೆ
ಆಯೋಜನೆ: ತ್ಯಾಗರಾಜ ನಗರದ ಶ್ರೀ ಮಧ್ವ ಸುವ್ವಾಲಿ ಸಂಘ
ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿ ಮಠ, 5ನೇ ಬಡಾವಣೆ, ಜಯನಗರ
ಸಮಯ: ಸಂಜೆ 6.30

ಪ್ರವಚನ
ಉಪಸ್ಥಿತಿ: ಪಂಡಿತ್ ಪುರಂದರಾಚಾರ್ಯ ಹಯಗ್ರೀವ
ಆಯೋಜನೆ: ಶ್ರೀ ದಿಗ್ವಿಜಯ ಲಕ್ಷ್ಮಿ ನಾರಾಯಣಸ್ವಾಮಿ ಸನ್ನಿಧಾನ
ಸ್ಥಳ: 5ನೇ ರಸ್ತೆ, ಶಂಕರಪುರ, ಉತ್ತರಾದಿ ಮಠ, ಬಸವನಗುಡಿ
ಸಮಯ: ಸಂಜೆ 6.30

ಹರಿಕಥಾ ಕಾರ್ಯಕ್ರಮ
ಆಯೋಜನೆ: ಶ್ರೀ ದಾರಿ ಆಂಜನೇಯ ಸ್ವಾಮಿ ಚಾರಿಟಬಲ್ ಟ್ರಸ್ಟ್
ಸ್ಥಳ: ಶ್ರೀ ದಾರಿ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ, ಯಶವಂತಪುರ
ಸಮಯ: ಸಂಜೆ 7

ಓದುಗರ ಗಮನಕ್ಕೆ: ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಕೃತಿ ಬಿಡುಗಡೆ, ಕಲಾ ಪ್ರದರ್ಶನ ಮತ್ತು ಇತರ ಸಾರ್ವಜನಿಕ ಕಾರ್ಯಕ್ರಮಗಳ ಮಾಹಿತಿ ಮತ್ತು ವಿವರವನ್ನು ಮುಂಚಿತವಾಗಿ ಪತ್ರಿಕೆಗೆ ಕಳುಹಿಸಿ ಕೊಡಬಹುದು. ನಿಮ್ಮ ಕಾರ್ಯಕ್ರಮ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ:** ವಿಶ್ವವಾಣಿ ದಿನಪತ್ರಿಕೆ, ಎರಡನೇ ಮಹಡಿ, ನಂ.1687, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ದೇವಾಲಯದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098 ., **ಇ-ಮೇಲ್ ವಿಳಾಸ:** vishvavaninews@gmail.com ಇಲ್ಲಿಗೆ ಕಳುಹಿಸಬಹುದು.